# ಗೋಕರ್ಣದಲ್ಲಿ ನಿಂತು ಕವಿಯ ನೆನೆದು...
# ರಥಬೀದಿಯಲ್ಲಿ ಕಥೆ–ಕಾವ್ಯದ ಬಿಂಬಗಳ ಸವಾರಿ

ಶಿವನ ಆತ್ಮಲಿಂಗದ ನೆಲೆ ಎನ್ನುವ ಕಾರಣಕ್ಕೆ ಆಸ್ತಿಕರಿಗೆ ಹಾಗೂ ಮೋಹಕ ಕಡಲ ಕಿನಾರಿಯ ಮೂಲಕ ಪ್ರಕೃತಿಯಾರಾಧಕರಿಗೆ ಗೋಕರ್ಣ ಅಚ್ಚುಮೆಚ್ಚು. ಆದರೆ, ಇತ್ತೀಚೆಗೆ ಗೋಕರ್ಣಕ್ಕೆ ಭೇಟಿ ಕೊಟ್ಟ ಯುವ ಕವಿಯೊಬ್ಬರಿಗೆ ಅಲ್ಲಿ ಕಾಣಿಸಿದ್ದು ಕಥೆಗಾರ ಜಯಂತ ಕಾಯ್ಕಿಣಿ ಅವರ ಕಥೆ–ಕಾವ್ಯದ ಬಿಂಬಗಳು. ಬರಹಗಾರನ ಮೂಲಕ ಊರನ್ನು ಆಪ್ತವಾಗಿಸಿಕೊಳ್ಳುವ ವಿಶಿಷ್ಟ ಬರಹವಿದು.

■ ಡಾ ಲಕ್ಷ್ಮಣ ವಿ.ಎ.



**ಗೋ**ಕರ್ಣಕ್ಕೆ ಎಷ್ಟೊಂದು ಮುಖ. ಅದು ಆಸ್ತಿಕರ ಪಾಲಿಗೆ ಆತ್ಮಲಿಂಗದ ಆಕರ್ಷಣೆ, ಗಣಪತಿಯ ದೇವಾಲಯ, ಪಾಪ ಕಳೆಯುವ ಕೋಟಿ ತೀರ್ಥ, ಪವಿತ್ರ ಜಲದ ರಾಮತೀರ್ಥ; ವಿದೇಶಿ ಪ್ರವಾಸಿಗರ ಪಾಲಿನ ಶಾಂತ ಸುಂದರ ಬೀಚಿನ ಅರಬ್ಬೀ ಸಮುದ್ರ.

‘ರೊಕ್ಕ ಇದ್ದವರು ಗೋಕರ್ಣಕ್ಕೆ ಹೋಗುತ್ತಾರೆ, ಸೊಕ್ಕು ಇರುವವರು ಯಾಣಕ್ಕೆ ಹೋಗುತ್ತಾರೆ’ ಎಂಬ ಜನಪದರ ಮಾತು ಈ ಭಾಗದಲ್ಲಿದೆ. ರೊಕ್ಕ ಇರುವವರಿಗೆ ಮಾತ್ರ ಯಾಕೆ ಗೋಕರ್ಣ ಎಂಬುದು ಅಲ್ಲಿನ ವಸತಿಗೃಹಗಳ ಬಾಡಿಗೆ